# ಕಣ್ಣಾಮುಚ್ಚಾಲೆಗೆ ಕೊನೆ, ಹುತ್ತದಿಂದ ಹೊರಬಂತು ಹಾವು



**21**

ಪ್ರೊ. ಭಾಸ್ಕರ್ ಲ್ಯಾಬ್‌ನಲ್ಲಿ ಯಾವುದೋ ಕೆಲಸದಲ್ಲಿ ತೊಡಗಿದ್ದರು. ಯಾವುದರಲ್ಲೂ ವಿಶೇಷ ಆಸಕ್ತಿಯಿಲ್ಲ. ನಟರಾಜ್ ಪಟ್ಟಣಶೆಟ್ಟಿ ಲ್ಯಾಬ್‌ನ ಒಳನುಗ್ಗಿ ಬಂದರು. 'ಹಲೋ ನಟರಾಜ್, ಯಾವಾಗ ಬಂದಿರಿ, ಬನ್ನಿ' ಎಂಬುದಾಗಿ ಪ್ರೊ. ಭಾಸ್ಕರ್ ಸ್ವಾಗತಿಸುತ್ತಾ,

'ಏನಾಯ್ತು ಹೋದ ಕೆಲಸ. ದೀಪೂ ಸಿಕ್ಕಿದ್ನೆ?' ಎಂದರು ಕುತೂಹಲದಿಂದ.

'ಹೌದು'

'ಏನು? ಸಿಕ್ಕಿದ್ನೇ ಆ ರಾಸ್ಕಲ್?'

'ಹೌದು ಪ್ರೊಫೆಸರ್.'

'ಒಪ್ಪಿಕೊಂಡನಾ? ಅವ್ನನ್ನು ನನಗೆ ಬಿಟ್ಟುಕೊಡಿ ನಟರಾಜ್. ಪೊಲೀಸರ ಕೈಗೆ ಕೊಡಬೇಡಿ ಮಿ. ನಟರಾಜ್, ಪ್ಲೀಸ್! ಐ ಶಲ್ ಕಿಲ್ ಹಿಮ್.'

'ಅದಕ್ಕೂ ಮುಂಚೆ ನಿಮ್ಮಿಂದ ಕೆಲವು ಮಾಹಿತಿಗಳು ಬೇಕಾಗಿವೆ. ಕೇಳಿದೇಂತ ಬೇಸರ ಮಾಡಿಕೋಬೇಡಿ' ನಟರಾಜ್ ಮಾತಿಗೆ ಮೊದಲುಮಾಡಿದರು.

'ಬನ್ನಿ, ಚೇಂಬರ್‌ಗೆ ಹೋಗೋಣ' ಇಬ್ಬರೂ ಚೇಂಬರಿನಲ್ಲಿ ಬಂದು ಕುಳಿತರು.

'ಕೇಳಿ', ಪ್ರೊ. ಭಾಸ್ಕರ್ ಹೇಳಿದರು.

'ನೀವು ಎಷ್ಟು ವರ್ಷ ದೆಹಲಿಯ ಗುಪ್ತಾ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೈಂಟಿಸ್ಟ್ ಆಗಿ ಕೆಲಸ ನಿರ್ವಹಿಸಿದಿರಿ?'

'ಗುಪ್ತಾ ಇನ್‌ಸ್ಟಿಟ್ಯೂಟ್?'

'ಹೌದು, ಯಾಕೆ, ಆಶ್ಚರ್ಯವಾಯಿತೆ?'

'ಯಾವುದೋ ಕ್ಷೇತ್ರ ಕಾರ್ಯ ಮಾಡೋದಕ್ಕೇಂತ ಬಂದವರು ನೀವು. ಇಂಥ ವಿಚಾರಗಳೆಲ್ಲ ನಿಮಗ್ಯಾಕೆ? ನಿಮ್ಮ ಕೆಲ್ಸ ಮಾಡ್ಕೊಂಡು ಹೋದ್ರೆ ಸಾಲ್ದಾ ಮಿ. ನಟರಾಜ್ ಪಟ್ಟಣಶೆಟ್ಟಿ?'

'ನನ್ನ ಕೆಲ್ಸ ಮಾಡೋದಕ್ಕೇಂತಾನೇ ನಾ ಬಂದಿರೂದು' ನಟರಾಜ್ ಜೇಬಿನಿಂದ ಕಾರ್ಡ್ ತೆಗೆದು ತೋರಿಸ್ತಾ, 'ನಿಮ್ಮಿಂದ ನೇರವಾಗಿ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿದ್ರೇನೆ ನನ್ನ ಸಂಶೋಧನೆ ಕಂಪ್ಲೀಟಾಗೋದು, ಹೇಳಿ ಪ್ರೊಫೆಸರ್.'

'ಹೇಯ್, ಇದು ಚೆನ್ನಾಗಿದೆ. ಅಂದ್ರೆ ನನ್ನನ್ನು ಹುಡುಕೋದೇ ನಿಮ್ಮ ಸಂಶೋಧನೆ! ನಾನಿಲ್ಲಿದ್ದೇನೇಂತ ಯಾರಂದ್ರು ನಿಮಗೆ?'

'ನನ್ನ ಪ್ರಶ್ನೆಗೆ ಉತ್ತರ ಕೊಡಿ ಪ್ರೊ. ಭಾಸ್ಕರ್. ಎಷ್ಟು ವರ್ಷದಿಂದ?'

'ಸುಮಾರು ಹನ್ನೊಂದು ವರ್ಷಗಳಿಂದ.'

'ಹಾಗಿದ್ರೆ ನೀವೇ ಸೀನಿಯರ್ ಸೈಂಟಿಸ್ಟ್ ಆಗಿದ್ದಿರಬೇಕು.'

'ಅಲ್ಲ, ಪ್ರೊ. ಗುಪ್ತಾ ಇದ್ದರು.'

'ಇದ್ದರು – ಅಂದರೆ?'

'ಅಂದರೆ – ಈಗ ಅವರಿಲ್ಲ. ಅವರು ತೀರಿಹೋದ ನಂತರ ನನಗೂ ಅಲ್ಲಿರೋದು ಸಾಧ್ಯವಾಗಲಿಲ್ಲ.'

'ಅಲ್ಲೇ ಹನ್ನೊಂದು ವರ್ಷಗಳ ಅನುಭವ. ಅದಕ್ಕೂ ಮೊದಲು ಅಮೆರಿಕದ ಕ್ಯಾಂಬ್ರಿನಾ ಯುನಿವರ್ಸಿಟಿಯಲ್ಲಿ ಸಂಶೋಧನಾ ಸಹಾಯಕರಾಗಿದ್ದವರು ಯಾಕ್ರಿ ಅದನ್ನು ಬಿಟ್ಟುಬಂದು ಹೊಸದಾಗಿ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿಕೊಂಡ್ರಿ?'

'ಅದು ಇದ್ಯಾಕೆ ಇಂಥ ನಾನ್ಸೆನ್ಸ್ ಪ್ರಶ್ನೆಗಳು ಕೇಳ್ತಾ ಇದ್ದೀರಾ ಮಿ. ನಟರಾಜ್!'

'ಹೇಳಿ, ಕ್ಯಾಂಬ್ರಿನಾ ಯುನಿವರ್ಸಿಟಿಯಲ್ಲಿ ಏನು ನಡೆಯಿತು? ನೀವ್ಯಾಕೆ ಜೈಲಲ್ಲಿದ್ದಿರಿ?'

'ನೋಡಿ, ಸುಮ್ಮಸುಮ್ಮನೆ ನನ್ನ ರೇಗಿಸಬೇಡಿ. ನಿಮ್ಮದೇನು ಕೆಲಸವೋ ಅದನ್ನು ನೋಡ್ಕೊಂಡು ಹೋಗಿ. ಸಂಬಂಧವಿಲ್ದಿರೋ ಪ್ರಶ್ನೆ ಕೇಳಿದ್ರೆ ಹುಷಾರ್", ಪ್ರೊ. ಭಾಸ್ಕರ್ ಸಿಟ್ಟಿನಿಂದ ಏದುಸಿರು ಬಿಡುತ್ತಾ ಥರಥರ ನಡುಗಿದರು.

'ಕೂಲ್ ಡೌನ್ ಡಾಕ್ಟರ್, ಸ್ವಲ್ಪ ನೀರು ಕುಡೀರಿ.'

ಪ್ರೊ. ಭಾಸ್ಕರ್ ರಪರಪನೆ ಡ್ರಾಯರ್‌ನಿಂದ ಚಾರ್‌ಮಿನಾರ್ ತೆಗೆದು ಬೆಂಕಿ ಹಚ್ಚಿ ಗಬಗಬನೆ ಸೇದಿದರು. ಇಬ್ಬರೂ ತುಸು ಹೊತ್ತು ಮೌನವಾದರು.

'ಸರಿ. ಮುಂದುವರಿಸ್ಲಾ? ನಿಮ್ಮ ಬಗ್ಗೆ ತಿಳಿದುಕೊಳ್ಳುವುದಕ್ಕಾಗಿ ಪ್ಲಾಂಟರ್ ಸೋಮಣ್ಣನವರ ಅತಿಥಿಯಾದೆ. ಈಗಂತೂ ನಾನು ಯಾರು ಎಂಬುದು ನಿಮಗೆ ಸ್ಪಷ್ಟವಾದ ಕಾರಣ ನೇರವಾಗಿ ನನ್ನ ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಮಾತುಗಳನ್ನು ನಾನು ರೆಕಾರ್ಡ್ ಮಾಡ್ಕೊಳ್ತೇನೆ. ಪ್ರೊ. ಗುಪ್ತಾ ಹೇಗೆ ತೀರಿಕೊಂಡರು?' ನಿಧಾನವಾಗಿ ಯಥಾಸ್ಥಿತಿಗೆ ಬಂದ ಪ್ರೊ. ಭಾಸ್ಕರ್ ಮಾತಿಗೆ ತೊಡಗಿದರು.

'ಲ್ಯಾಬ್‌ನಲ್ಲಿ ಕೆಲಸ ಮಾಡುತ್ತಿದ್ದಾಗ'

'ಕೆಲಸ ಮಾಡುತ್ತಿದ್ದಾಗ? ಹ್ಞುಂ, ಹೇಳಿ.'

'ಗ್ಯಾಸ್ ಸಿಲಿಂಡರ್ ಲೀಕೇಜಿನಿಂದ ಬೆಂಕಿ ಹತ್ತಿ ತೀರಿಕೊಂಡರು.'